


International Journal of Kannada Research
www.kannadajournal.com

**ISSN: 2454–5813**
IJKR 2019; 5(3): 13-18
© 2019 IJKR
www.kannadajournal.com
Received: 09-05-2019
Accepted: 12-06-2019

**ಬಸವರಾಜು ಕೆ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ.ಕಾಲೇಜು, ಹನಗೂಡು
ಹುಣಸೂರು

**Correspondence**
**ಬಸವರಾಜು ಕೆ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ.ಕಾಲೇಜು, ಹನಗೂಡು
ಹುಣಸೂರು

# ಮಹಾಭಾರತ ಪರಂಪರೆಯಲ್ಲಿ ಸುಜನಾರವರ "ಯುಗಸಂಧ್ಯಾ"

**ಬಸವರಾಜು ಕೆ**

ಸುಜನಾರವರ ಯುಗಸಂಧ್ಯಾ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಮಹಾಕಾವ್ಯ. ಮೊದಲು ಪ್ರಕಟವಾದದ್ದು ೧೯೭೯ರಲ್ಲಿ. ಅಲ್ಲಿಂದ ೨೦೧೫ ರವರೆಗೆ ನಾಲ್ಕು ಮುದ್ರಣಗಳನ್ನು ಕಂಡಿರುವುದು ಈ ಕೃತಿಯ ಮಾನ್ಯತೆ, ಜನಪ್ರಿಯತೆ ಮತ್ತು ಮಹಾಕಾವ್ಯಕ್ಕೆ ಇಂದಿಗೂ ಇರುವ ಸ್ಥಾನಮಾನವನ್ನು ತಿಳಿಸುತ್ತದೆ.

ಯಾವುದೇ ಒಂದು ಕಾವ್ಯ ಹುಟ್ಟಲು ಒಂದು ಪ್ರೇರಣೆ, ಒಂದು ಚಿಂತನೆ ಕಾರಣವಾಗಿರುತ್ತದೆ. ಮಹಾಕಾವ್ಯದ ರಚನೆಯಲ್ಲಂತು ಕವಿಗೆ ನಾನಾ ಕಾರಣಗಳು ಪ್ರೇರಣೆ ಒದಗಿಸುತ್ತವೆ. ಕವಿಯೋರ್ವ ಯುಗಪ್ರಧಾನವಾದ ದರ್ಶನವನ್ನು ಅಂತರಂಗದಲ್ಲಿ ಕಂಡಾಗ ಅದರ ಅಭಿವ್ಯಕ್ತಿಗಾಗಿ ವಸ್ತುವನ್ನು ಆಯ್ದುಕೊಂಡು ಮಾಧ್ಯಮವಾಗಿಸಿಕೊಳ್ಳುತ್ತಾನೆ. ಸುಜನಾರವರ ಯುಗಸಂಧ್ಯಾ ಕೃತಿಯು ಹುಟ್ಟಲು ಕವಿಯ ಕಾಣ್ಕೆಯ ಜೊತೆಗೆ ಹಲವಾರು ಅಂಶಗಳು ಪ್ರೇರಣೆ ಒದಗಿಸಿವೆ.

ಮಹಾಭಾರತದಲ್ಲಿ ಯುದ್ಧ ಮತ್ತು ಅಶ್ವಮೇಧಿಕ ಸನ್ನಿವೇಶಗಳು ಕಾವ್ಯದ ಉತ್ತುಂಗದ ಮೈದಾನದಲ್ಲಿ ನಡೆದರೆ ಯುದ್ಧದವರೆಗಿನ ಘಟನೆಗಳು ಉತ್ಸರ್ಪಿಣಿಯನ್ನು ಯುದ್ಧ ನಂತರದ ಸನ್ನಿವೇಶಗಳು ಅವಸರ್ಪಿಣಿಯನ್ನು ತಿಳಿಸುತ್ತವೆ. ಪೂರ್ವಭಾರತ ಕುರು ಪಾಂಡವರ ಯುದ್ಧದವರೆಗೆ ಮಾತ್ರ ಇದೆ. ಉತ್ತರಭಾರತ ಯುದ್ಧೋತ್ತರ ಕಥೆಯನ್ನು ತಿಳಿಸುತ್ತದೆ. ವ್ಯಾಸಭಾರತ ಪೂರ್ವ ಮತ್ತು ಉತ್ತರ ಭಾರತವನ್ನು ಒಳಗೊಂಡ ಸಂಪೂರ್ಣಭಾರತ. ಆದರೆ ತದನಂತರ ಮಹಾಭಾರತ ಆಧರಿಸಿ ಕಾವ್ಯ ಬರೆಯಲು ಹೋದವರು ಉತ್ತರಭಾರತಕ್ಕಿಂತ ಪೂರ್ವಭಾರತಕ್ಕೆ ಹೆಚ್ಚು ಒತ್ತುಕೊಟ್ಟರು. ಅನೇಕರ ಕೃತಿಗಳು ಪಟ್ಟಾಭಿಷೇಕದವರೆಗೆ ಕಟ್ಟಲ್ಪಟ್ಟಿವೆ. ಉತ್ತರಭಾರತ ಅವರಿಗೆ ಪ್ರಾಧಾನ್ಯ ವೆನಿಸಿಲ್ಲ. ಆದರೆ ಸುಜನಾರವರು ಪೂರ್ವಭಾರತದಂತೆಯೇ ಅಥವಾ ಅದಕ್ಕಿಂತಲೂ ಪ್ರಧಾನವಾಗಿ ಉತ್ತರ ಭಾರತ ಮುಖ್ಯವೆನ್ನುತ್ತಾರೆ. ಇವೆರಡರ ನಡುವಿನ ವ್ಯತ್ಯಾಸವನ್ನು ಸುಜನಾ ಅವರು ಮುಖ್ಯವಾಗಿ ಎರಡು ನೆಲೆಯಲ್ಲಿ ಹೀಗೆ ಗುರುತಿಸುತ್ತಾರೆ.

೧. ಕಾಲಮಾನದ ದೃಷ್ಟಿಯಿಂದ ಮೂವತ್ತಾರು ವರ್ಷದ ಅವಧಿಯಲ್ಲಿ ನಡೆಯುವ ಆ ಕಥೆ ಅಷ್ಟೇನೂ ವಿಪುಲ ಘಟನಾವಳಿಗಳಿಂದ ತುಂಬಿಲ್ಲದಿದ್ದರೂ ಬರುವಷ್ಟೇ ವಿರಳ ಘಟನೆಗಳು ಹೃದಯವೇಧಕವಾಗಿವೆ ಮುಕ್ಕಾಲು ಪಾಲು ಕಥೆಯೆಲ್ಲವೂ ಅಸಾಧಾರಣ ತತ್ವಾರಣ್ಯ ತಪೋವನಗಳಲ್ಲಿ ಮರೆಯಾಗಿದೆ

೨. ತತ್ವಪ್ರಿಯರಿಗೆ ಈ ಮಹಾರಣ್ಯ ತೋರಿಸದ ಸಂಪತ್ತೇ ಇಲ್ಲ ಈ ತತ್ವಾವ್ಯಾವರ್ಣನೆಯಲ್ಲೂ ಮಾನುಷ ವ್ಯಾಪಾರಗಳ ಸೂಕ್ಷ್ಮಚಿತ್ರಣ ಬರುತ್ತದೆಯಾದರೂ ಅವುಗಳ ಸಾಂಕೇತಿಕತೆಯೂ ಹಾಗೂ ಕಥಾ ಸಂಬಂಧಿಯಾದ ಘಟನೆಗಳೂ ಮೇಲುವೋದಿನ ಕಣ್ಣುತಪ್ಪಿಸಿಕೊಳ್ಳುವುದುಂಟು.[೧]

ಈ ಎರಡೂ ಅಂಶಗಳನ್ನು ಪೂರ್ವ ಭಾರತ ಕಥೆಯನ್ನು ಗ್ರಹಿಸಿದವರ ಮತ್ತು ಕಟ್ಟಿದವರ ಒಂದು ಮಿತಿಯಾಗಿ ಸುಜನಾ ಅವರು ಗುರುತಿಸುತ್ತಾರೆ. ವಿಪುಲ ಘಟನಾವಳಿಗಳು ಪೂರ್ವಭಾಗದಲ್ಲಿ ಇಲ್ಲ ಎನ್ನುವುದು ಅವರ ಅಭಿಪ್ರಾಯ. ಅಂದರೆ ಅವರು ಯುದ್ಧೋತ್ತರ ಭಾರತದಲ್ಲಿ ಬರುವ ಘಟನಾವಳಿಗಳಲ್ಲಿನ ಬದುಕಿನ ವ್ಯಾಪಾರದ ಚಿತ್ರಣ ಪೂರ್ವ ಭಾರತದ ಘಟನಾವಳಿಗಳಲ್ಲಿಲ್ಲ ಎಂದು ಭಾವಿಸಿದ್ದಾರೆ. ಅದರೂ ನಮ್ಮ ಕವಿಗಳು ಪೂರ್ವಭಾರತಕ್ಕೆ ಸೀಮಿತಗೊಳಿಸುವುದನ್ನು "ವ್ಯಾಸಮಹಾಭಾರತವನ್ನು ಕನ್ನಡಕ್ಕೆ ಶಕ್ತವಾಗಿ ಅವತಾರಮಾಡಿಸಿದ ಪಂಪ ಕುಮಾರವ್ಯಾಸರು ಆ ಮಹಾ ಕಥೆಯ ಗೆಲುವಿನ ಭಾಗಕ್ಕಷ್ಟೆ ತಮ್ಮ ಕಾವ್ಯಗಳನ್ನು ಪರಿಮಿತಗೊಳಿಸಿದ್ದಾರೆ"[೨]ಎಂದು ಹೇಳಿ ಉತ್ತರ ಭಾಗದ ವೈಶಿಷ್ಟ್ಯವನ್ನು ಎರಡು ನೆಲೆಯಲ್ಲಿ ಹೀಗೆ ಗುರುತಿಸುತ್ತಾರೆ.

೧. ಎಚ್ಚರಗಣ್ಣಿನಿಂದ ಗಮನಿಸಿದಾಗ ಯುದ್ಧೋತ್ತರ ಮಹಾಭಾರತ ಕಥೆ ಆ ಮಹಾಕಾವ್ಯಕ್ಕೆ

ಅರ್ಥಪೂರ್ಣವಾದ ಗಂಭೀರ ಮುಕ್ತಾಯವಾಗಿ ಒಪ್ಪಂದವಾಗಿ ಬರುತ್ತದೆ.

೨. ಧರ್ಮಾಧರ್ಮಗಳ ನಡುವಣ ಸ್ಪಷ್ಟಸಂಘರ್ಷವಾಗಿ ತೋರುವ ಈ ಕಥೆ ಅಷ್ಟು ಸರಳವಾದ ಅರ್ಥೈಕೆಗೆ ಒದಗಿಬರುವುದಿಲ್ಲ ಎನ್ನುವುದು ಗಮನಾರ್ಹ ಸಂಗತಿಯಾಗುತ್ತದೆ. ಧರ್ಮದ ಅರ್ಥ ಗೂಢವೂ ಗಾಡವೂ ಆದಂತೆ ತೋರಿಬರುತ್ತದೆ ಈ ಗ್ರಹಿಕೆ ಅಗ್ರಾಹ್ಯವಾಗುವುದು ಯಾದವವಂಶದ ಸರ್ವನಾಶದ ಘಟನೆ ನಡೆದಾಗ.[೩]

ಅಂದರೆ ಯುದ್ಧೋತ್ತರ ಕಥೆಯು ಮಹಾಭಾರತಕ್ಕೆ ನಿಜ ಮುಕ್ತಾಯವನ್ನು ಹೇಳುತ್ತದೆ. ಆದರೂ ಅದನ್ನು ಹಲವರು ಪ್ರಕ್ಷಿಪ್ತವೆಂದು ಭಾವಿಸಿದ ಕಾರಣ ಅದರ ಸತ್ಯಾಸತ್ಯತೆಯ ಬಗ್ಗೆ ಅನುಮಾನಗಳು ಮೂಡಿದವು. "ವಾಲ್ಮೀಕಿ ರಾಮಾಯಣದ ಉತ್ತರಕಾಂಡವನ್ನು ಪ್ರಕ್ಷಿಪ್ತ ಭಾಗವೆಂದೂ, ಉತ್ತರಕಾಲೀನ ರಚನೆಯೆಂದೂ ಭಾವಿಸಿರುವಂತೆ, ಮಹಾಭಾರತದ ಯುದ್ಧೋತ್ತರ ಮಹಾಪ್ರಸ್ಥಾನವನ್ನು ಅನ್ಯಕವಿಕೃತವಾದ ಅಸಮಂಜಸವಾದ ಭಾಗವೆಂದೂ ಭಾವಿಸಿರುವ ವಿದ್ವಾಂಸರೂ ಇದ್ದಾರೆ"[೪] ಅದನ್ನು ಹೆಚ್ಚಾಗಿ ಕಾವ್ಯ ಪರಿಗಣಿಸಲಿಲ್ಲ. ಧರ್ಮ ಅಧರ್ಮ ಸಂಘರ್ಷದ ಚಿತ್ರಣ ಪೂರ್ವಭಾರತಕ್ಕಿಂತ ಉತ್ತರಭಾರತದಲ್ಲಿ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಿಂದ ಅವರು ಯುದ್ಧೋತ್ತರ ಕಥೆಯನ್ನು ಆಯ್ದುಕೊಂಡು ಯುಗಸಂಧ್ಯಾವನ್ನು ರಚಿಸುತ್ತಾರೆ.

ಯುದ್ಧೋತ್ತರ ಭಾರತ ಕಥೆಗೆ ಸಂಬಂಧಿಸಿದಂತೆ ಲೇಖಕರು ಅರಿಕೆಯಲ್ಲಿ ಹೇಳುವ ಅಭಿಪ್ರಾಯಗಳು ಇಂತಿವೆ.

೧. ಯುದ್ಧ ಕಾರಣದಿಂದ ಪಾಂಡವರು ಗೆದ್ದರೂ ಅವರ ಗೆಲುವು ವಿಜಯೋತ್ಸವವಾಗಿರಲಿಲ್ಲ
೨. ಸಾವಿನ ಬೇಗೆ ಸೋತವರನ್ನೂ ಗೆದ್ದವರನ್ನೂ ಸಮಾನವಾಗಿ ತೆಗೆದುಕೊಂಡಿತ್ತು
೩. ಗೆದ್ದವರು ಸೋತು ಸತ್ತವರ ಬಂಧುಗಳ ಜೊತೆಯಲ್ಲಿಯೇ ಒಡಬಾಳಬೇಕಿತ್ತು

ಇದಕ್ಕೆಲ್ಲ ಕಾರಣ ಸೋತವರು, ಸೋತು ಸತ್ತವರು ವಾಸ್ತವವಾಗಿ ಶತ್ರುಗಳಾಗಿರಲಿಲ್ಲ ದಾಯಾದಿಗಳಾಗಿದ್ದರು. ದಾಯಾದಿಗಳನ್ನು ಕಳೆದುಕೊಂಡ ದುಃಖವೇ ಅತೀವವಾಗಿರುವಾಗ, ಅ ದುಃಖಕ್ಕೆ ಅವರೇ ಕಾರಣವಾಗಿರುವುದು ಆ ದುಃಖ ಮತ್ತಷ್ಟು ಹೆಚ್ಚಲು ಕಾರಣವಾಗಿತ್ತು. ಸೋಲಿಸಿ ಸಾಯಿಸಿ ಗೆಲ್ಲಲೇಬೇಕೆಂಬ ಹಠವೇನೂ ಪಾಂಡವರಿಗೆ ಇರಲಿಲ್ಲ. ಅವರಿಗೆ ದಾಯಾದಿಗಳಾದ ಕೌರವರನ್ನು ಬದುಕಿಸಬೇಕೆಂಬ ಆಸೆಯಿತ್ತು. ಅದರಲ್ಲಿಯೂ ದರ್ಮರಾಯನಿಗೆ ಆ ಆಸೆ ತೀವ್ರವಾಗಿಯೇ ಇತ್ತು. ಆದರೆ ಕೌರವರೇ ಬಾಳಲು ಸಿದ್ಧರಿರಲಿಲ್ಲ. ಹಠ–ಛಲ ದ್ವೇಷಕ್ಕೆ ಅವರು ಬಲಿಯಾದರು; ಪಾಂಡವರು ನಿಮಿತ್ತ ಮಾತ್ರರಾದರು. ಈ ಕಾರಣದಿಂದ ಈ ಮೇಲಿನ ಮೂರೂ ಅಂಶಗಳ ಮೇಲೆಯೇ ಯುದ್ಧೋತ್ತರ ಭಾರತ ಕಥೆಯ ಯುಗಸಂಧ್ಯಾ ಮಹಾಕಾವ್ಯವು ರೂಪಿತವಾಗುತ್ತಾ ಹೋಗಿದೆ ಯುದ್ಧೋತ್ತರ ಮಹಾಭಾರತದಲ್ಲಿನ ಭಾವನೆಗಳ ವ್ಯಾಪಾರವನ್ನು ಸುಜನಾರವರು ಹೀಗೆ ಹೇಳುತ್ತಾರೆ.

೧. ತನಿಯದ ತಮ್ಮ ಅನುಭವದಲ್ಲಿ ಬಾಳಲಾರದೆ ಉಭಯರೂ ಬಳಲುತ್ತಾರೆ
೨. ತವರಿನಲ್ಲಿಯೇ ಪರಕೀಯತೆಯಿಂದ ಬಾಳಬೇಕಾಗುತ್ತದೆ
೩. ಹೊಸ ಪರಿಸರದಲ್ಲಿ ಹಳೆಯ ಭಾವನೆಗಳು ಹೊಸ ನೆಲೆಯನ್ನು ಕಂಡುಕೊಳ್ಳಲಾರದೆ ಹಳೆಯ ನೆಲೆಯನ್ನೂ ಬಿಡಲಾರದೆ ತೊಳಲಾಡುತ್ತಾರೆ
೪. ಗೆಲ್ಲುವ ಬಯಕೆಯ ಉತ್ಕಟತೆಯಲ್ಲಿ ಕಾಣಲಾಗದಿದ್ದ ಧರ್ಮಾರ್ಥಕಾಮ ನೆಲೆ ಬೆಲೆಗಳು ವಿಜಯಾನಂತರದ ಘಳಿಗೆಯಲ್ಲಿ ತಮ್ಮ ಸಹಜವರ್ಣವನ್ನು ಕಂಡುಕೊಳ್ಳತೊಡಗುತ್ತವೆ.
೫. ವಿಫುಲಕ್ರಿಯೆಯಿಂದ ತುಂಬಿರದ ಯುದ್ಧೋತ್ತರ ದಿನದ ಜನ ಮನಸ್ಸನ್ನು ಹಳೆಯ ಅನುಭವಗಳ ನೆನಸೆ ಹೆಚ್ಚು ಕಾಡುವುದು ಸಹಜ. ಸೋತು ಅಸಹಾಯಕರಾದವರಲ್ಲಿ ಅದು ಮತ್ತೂ ಅಧಿಕ ಅರಗದ ಅನುಭವಗಳನ್ನು ಮೆಲುಕುತ್ತಾ ಅರಗಿಸಿಕೊಳ್ಳುವ ಕ್ರಿಯೆಯಲ್ಲಿ ಅವರು ತೊಡಗುತ್ತಾರೆ

ಹೀಗೆ ಯುದ್ಧೋತ್ತರ ಭಾರತದಲ್ಲಿ ಭಾವನೆಗಳ ಸಂಘರ್ಷವನ್ನು ಗುರುತಿಸುವ ಸುಜನಾರವರು ಅವುಗಳನ್ನು ಈ ಕಾವ್ಯ ಚಿತ್ರಿಸುತ್ತದೆ ಎಂದಿದ್ದಾರೆ. ಅಂತೆಯೇ ಕಾವ್ಯದಲ್ಲಿ ಭಾವನೆಗಳ ವ್ಯಾಪಾರ ಮತ್ತು ಆಧುನಿಕ ಚಿಂತನೆಗಳು ಮೂಡಿಬಂದಿವೆ.

ಸೃಷ್ಟಿಯಲ್ಲಿ ಜೀವಿಚಕ್ರವನ್ನು ಗುರುತಿಸುತ್ತೇವೆ. ಆಹಾರ ಸರಪಳಿಯು ಅದರ ಒಂದು ಭಾಗವಾಗಿದೆ. ಮಾನವ ನಾನಾ ಕಾರಣಗಳಿಂದ ಅನೇಕ ಪ್ರಾಣಿ ಪಕ್ಷಿ ಕ್ರಿಮಿ ಕೀಟಗಳನ್ನು ನಿರ್ಮೂಲನೆ ಮಾಡುತ್ತಿದ್ದಾನೆ. ಆದರೆ ಒಂದು ಅಳಿದರೆ ಸಹಜವಾಗಿ ಇನ್ನೊಂದು ಅಳಿಯುತ್ತದೆ. ಈ ಚಟುವಟಿಕೆ ಬೆಳೆಯುತ್ತಾ ಹೋದಂತೆ ಜೀವ ವೈವಿಧ್ಯತೆ ನಾಶವಾಗುತ್ತದೆ. ಅಂತೆಯೇ ಕೆಲವೊಮ್ಮೆ ದುಷ್ಟ ಪ್ರಾಣಿಗಳ ಉಪಟಳ ಹೆಚ್ಚಾಗಬಹುದು. ಮಾನವ ಪ್ರಾಣಿ ಮಾತ್ರ ಈ ಭೂಮಿ ಮೇಲೆ ಉಳಿಯುವ ಚಟುವಟಿಕೆಗಳು ಅರಿತೂ ಅರಿಯದೆಯೂ ನಡೆಯುತ್ತಿದೆ. ಆ ಹಿನ್ನೆಲೆಯಲ್ಲಿ ಸುಜನಾರವರು ಕಾವ್ಯದ ಒಂದು ಸಂದರ್ಭವನ್ನು ಅರ್ಥಪೂರ್ಣವಾಗಿ ಬೆಳೆಸುತ್ತಾರೆ. ಸಸ್ಯಹಾರಿ ಪ್ರಾಣಿಗಳಿಂತ ಮಾಂಸಾಹಾರಿ ಪ್ರಾಣಿಗಳು, ಕೀಟಗಳು ಒಂದು ಮತ್ತೊಂದನ್ನು ಆಶ್ರಯಿಸಿ ಬದುಕುತ್ತವೆ. ಆದ್ದರಿಂದ ಯಾವುದೇ ಜೀವಿಗಳ ವಂಶ ನಿರ್ಮೂಲನೆ ಮಾಡಬಾರದು. ಈ ತತ್ವವನ್ನು ಸರ್ಪಯಜ್ಞದ ಸಂದರ್ಭದಲ್ಲಿ ಕವಿ ತಂದಿದ್ದಾರೆ.

ಜನಮೇಜಯ ಸರ್ಪಯಾಗ ಮಾಡಿ ಎಲ್ಲಾ ಸರ್ಪಗಳನ್ನು ಸಂಹಾರ ಮಾಡಿಸುತ್ತಾನೆ. ಹಾವುಗಳಿಲ್ಲದ ಲೋಕದಲ್ಲಿ ಇಲಿ, ಹೆಗ್ಗಣಗಳು ಹೆಚ್ಚಾಗಿ ಅವುಗಳ ಅಟ್ಟಹಾಸ ಮೇರೆ ಮೀರುತ್ತದೆ. ಕೊನೆಗೆ ಅವುಗಳಿಗೆ ಆಹಾರ ಕೊರತೆಯಾಗಿ, ಅವುಗಳು ಸಾಯುತ್ತವೆ. ಸತ್ತ ಇಲಿ ಹೆಗ್ಗಣಗಳನ್ನು ತಿಂದ ಹದ್ದು ಕಾಗೆ ಅತಿಸಾರವಾಗಿ ಸಾಯುತ್ತವೆ. ಜನತೆ ರೋಗಗಳಿಗೆ ತುತ್ತಾಗುತ್ತಾರೆ. ಇಡೀ ಊರು ಸಾವಿನ ಮನೆಯಾಗುತ್ತದೆ. ಮೂಲದಲ್ಲಿ ಸರ್ಪಯಜ್ಞವು ಸರ್ಪರಾಜನ ಮೊರೆಗೆ ಮಾತ್ರ ಸೀಮಿತವಾಗಿದ್ದರೆ ಇಲ್ಲಿ ಓರ್ವ ಮೂರ್ಖ, ಸೃಷ್ಟಿ ಮೂಲವನ್ನು ಸರಿಯಾಗಿ ಅರಿಯದ ವ್ಯಕ್ತಿ ಪ್ರಕೃತಿಯ ಮೇಲೆ ನಡೆಸುವ ದೌರ್ಜನ್ಯ ಏನೆಲ್ಲಾ ಅನಾಹುತಗಳಿಗೆ ಕಾರಣವಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ಕವಿ ವ್ಯಕ್ತಪಡಿಸಿದ್ದಾರೆ.

ಮನೆಮನೆಗಳಲಿ, ಕಂಗೆಟ್ಟು
ಸರ್ಪಭಯಕತಿ ಮಿಗಿಲಾಗಿ ಕಾಡಿತು ಜನಮನವ,
ಗಣಪನಿಲ್ಲದ ಮೂಷಕದ ಭೀತಿ, ಮನೆಗಳಲಿ
ಗುಡಿಗುಡಿಸಿಲರವಟ್ಟಿಗೆಗಳಲಿ, ಮಠಗಳಲಿ, ತೋಟ
ಹೊಲಗದ್ದೆ ತೋಪಿನಲಿ, ಹೊಸ ರೂಪದಲಿ, ಕಡಿದು
ತಿಂದುವು ಅದು ಇದೆನ್ನದೆ, ಪವಿತ್ರವಿದು ಅಪವಿತ್ರವಿದು,
ಮೋಘವಿದಮೋಘವಿದುಯೆನದೆ ಉತ್ತರಿಸಿದವು
ಸಮಸ್ತವನು, ಸೀರೆ ತಲೆಪಾಗು ಕೋವಣವು,
ಕೊರಳಸರ ಮಾಂಗಲ್ಯದೊಳದಾರ ಜನಿವಾರ
ಉಡಿದಾರವೆನದೆ ಸಮಭಾವದಲಿ[೫]

ಮಹಾಭಾರತ ಯುದ್ಧಕ್ಕೆ ಸಂಬಂಧಿಸಿದಂತೆ ಸಹಜವಾಗಿ ಎಲ್ಲರಿಗೂ

ಹೇಳುವ ಪ್ರಶ್ನೆ ಕೃಷ್ಣ ದೇವನಾಗಿರುವಾಗ ಕುರುಕ್ಷೇತ್ರ ಯುದ್ಧ ಏಕಾಯ್ತು? ಶತೃ ಸಂಹಾರ ಮಾಡುವುದಕ್ಕಾಗಿ, ಧರ್ಮರಾಜ್ಯ ಸ್ಥಾಪನೆ ಮಾಡುವುದಕ್ಕಾಗಿ ಯುದ್ಧವಾಯಿತು ಎಂಬುದನ್ನು ಒಪ್ಪಿಕೊಳ್ಳಬಹುದಾದರೂ ಅಭಿಮನ್ಯುವಿನಂತಹ, ಲಕ್ಷಣಕುಮಾರನಂತಹ ಎಳೆವಯಸ್ಸಿನವರು, ಧರ್ಮ ಮಾರ್ಗದ ಕಡೆಗಿದ್ದವರು, ವಯಸ್ಸಾದವರು ಹೀಗೆ ಅನೇಕರು ಸತ್ತರಲ್ಲ ಎಂಬ ಪ್ರಶ್ನೆ ಕಾಡುತ್ತದೆ. ಅದಕ್ಕೆ ಉತ್ತರವನ್ನು ಕೊಡುವ ಪ್ರಯತ್ನವಾಗಿ ಸಂದರ್ಭವೊಂದನ್ನು ತರುತ್ತಾರೆ. ಯಾಗ ನಡೆಸಲು ತೀರ್ಮಾನಿಸಿ ಧರ್ಮರಾಯ ಸಂಪತ್ತನ್ನು ತರಲು ಹಿಮವದ್ ಪರ್ವತದತ್ತ ಹೋದಾಗ ಕೃಷ್ಣ ಸುಭದ್ರೆಯನ್ನು ಕರೆದುಕೊಂಡು ದ್ವಾರಕೆಯತ್ತ ಹೊರಡುತ್ತಾನೆ. ಆಗ ಸಂತ್ರಸ್ತ ಋಷಿಯೊಬ್ಬ ಹೇಳುವ ಮಾತು ಜನ ಸಾಮಾನ್ಯರು ಹೇಳುವ ಮಾತೇ ಆಗಿದೆ.

ನಿಲ್ಲು ನಿಲ್ಲೆಲೆ ದ್ವಾರಕೀಶ್ವರ
ನಿಲ್ಲು ಕಾದಿದ್ದೆ ನಾ ನಿನಗೆ ಈಸುದಿನ ಕುರುಪಾಂಡವರ
ನಡುವಣಂತಃಕಲಹವನು ನೀ ನಂದಿಸುವೆಯೆಂದಿದ್ದೆ
ದ್ವಾಪರ ವಿನಾಶವನು ತಡೆದು ಕೇಶಾರನು
ತಿದ್ದುವತಿಮಾನುಷನು ನೀನೆಂದು ಭ್ರಮಿಸಿದ್ದೆ
ಕನಸೊಡೆದು ಎಚ್ಚೆತ್ತೆ ಮಾನುಷರತಿಮಾನುಷ
ದಿವ್ಯೋದ್ಭವರೆನುವ ಮಂದಿಯ ನೆನೆದು ಅಸಹ್ಯವೆನಿಸಿದೆ
ನನಗೆ ನೀ ದೇವನೆಂತಹೆ? ಕದನಕಾಮುಕ
ಮಂದಿಗಳ ಮನದನ್ನ ವಂದಿಗರ ಪರಮಾತ್ಮ
ಬಿಚ್ಚಳಿಸು ಯುದ್ಧಘಟನೆಯ ಆದಿಮಧ್ಯಾಂತವನು
ಕಾದಿದ್ದೆ ನಿನಗಾಗಿ ಕವಡುನುಡಿಯದೆ ನನಗೆ
ಘಟಿತವೆಲ್ಲವನರುಹು ದಿಟವೆನೆಡಹಿದರೆ ಬಿಡದೆ
ಸುಡುವುದೆನ್ನುರು ಶಾಪ ಸಟೆಯಲ್ಲ ತಿಳಿ[೬]

ಎನ್ನುತ್ತಾನೆ. ಆತ ಮುಂದೆ ಹೇಳುವ ಹಲವು ಮಾತುಗಳು ಇಂದು ಶ್ರೀಕೃಷ್ಣನ ಬಗ್ಗೆ ಜನಸಾಮಾನ್ಯರು ಎತ್ತುವ ಪ್ರಶ್ನೆಗಳೇ ಆಗಿವೆ. ಅಮಾಯಕರು ಸತ್ತ ಬಗ್ಗೆ ಪ್ರಶ್ನಿಸುತ್ತಾನೆ. 'ಕೃಷ್ಣ ಕದನಮೋಹಿ"ದೇವರಲ್ಲ' ಇತ್ಯಾದಿಗಳೇ ಈತನ ಮಾತಿನಲ್ಲಿ ವ್ಯಕ್ತವಾಗಿವೆ. ಕೃಷ್ಣನು ಎಲ್ಲಕ್ಕೂ ದೈವಕೃಪೆಯೇ ಕಾರಣ ಹೊರತು ದೈವ ನಾನಲ್ಲ. ಸಹಜ ಘಟನೆಗಳು ದೈವ ಸ್ವರೂಪವಾದವು ಎಂದು ತನ್ನ ಬದುಕಲ್ಲಿ ನಡೆದ ಎಲ್ಲವೂ ಸಹಜವೆಂದು ಹೇಳುತ್ತಾನೆ. ಕುರುಕ್ಷೇತ್ರ ಯುದ್ಧವನ್ನು ಕುರಿತು

ಕುರುಯುದ್ಧವಿದು ನನ್ನ ಕೃತಿಯಲ್ಲ ತಿಳಿ ಋಷಿಯೆ
ವಿಧಿವಿಧಿತವೆನ್ನಲೆ? ಸುಯೋದನನ ಕೃತಿಯೆನಲೆ?
ಫಲದಿ ಕರ್ಮವ ಕಂಡು ವ್ಯಗ್ರಗೊಳ್ಳುವುದು ಮನುಜ ಸಹಜವು
ಬಿತ್ತಿದರೆ ಕಿಡಿಯ ಬೆಳೆವುದು ದವಾನಲವು ಮತ್ತಂತೆ ಬೆಳೆವುದು
ಪ್ರಭಂಜನವು ಗಳಿಯನು ಬಿತ್ತೆ ಭಗ್ನಗೊಂಡ ಕೃಶಾನು
ತೊಡಗುವನು ಲಯತಾಂಡವಕೆ ಕ್ಷುಬ್ಧವಾತದ ಸಂಗದಲಿ
ಭಗ್ನಮದರಹಂಕಾರದಲಿ ಬಳಲಿಹುದು ಜಗ
ತೊಳಲಿಬಳಲಿದುದು ದ್ವಾಪರವು ಕಂಸಾದಿ ಕೌರವರ
ವಿಕೃತ ಮದಮಾತ್ಸರ್ಯ ಜ್ವಾಲಾವರ್ತಗರ್ತದಲಿ[೭]ಎನ್ನುತ್ತಾನೆ. ಜೊತೆಗೆ
ಸಹಜ ರಾಜ್ಯದ ಲೋಭ ಕ್ಷತ್ರಿಯಕುಲಕೆ
ಅದರತಿಲೋಭಿ ಕೌರವನ ಭೂಕಾಮಕಿತಿಮಿತಿಯಿಲ್ಲ
ಅಂತವನ ಸಾಧನವಿಧಾನದಲಿ ಸವ್ಯಾಪಸವ್ಯ
ಭೇದಗಳಿಗೆಡೆಯಿಲ್ಲ[೮] ಎನ್ನುತ್ತಾನೆ

ಆಗ ಋಷಿಯು ತೃಪ್ತನಾಗುತ್ತಾನೆ. ಇಂದು ಕೃಷ್ಣನ ಬಗೆಗೆ ಕೆಲವು ಜನತೆ ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೃಷ್ಣನ ಮೂಲಕವೇ ಕವಿ ನೀಡಿದ್ದಾರೆ. ಬೇರೆಲ್ಲೂ ಕಾಣದ ಈ ಸಂದರ್ಭ ಹೊಸ ಸೃಷ್ಟಿಯಾಗಿದೆ. ಈ ಸಂದರ್ಭದಲ್ಲಿ ಆ ಋಷಿ ಹೇಳುವ ಮಾತು ಮನುಜರನ್ನು ಅವರವರ ಕಾರ್ಯಗಳಿಂದ ಉನ್ನತವಾಗಿ ಕಾಣಬೇಕು. ಅವರನ್ನು ದೈವತ್ವಕ್ಕೇರಿಸಬಾರದು ಎಂಬ ನಿಲುವನ್ನು ಹೊಂದಿದೆ.

ದೈವಾವತಾರರಲಿ ನನಗಿಲ್ಲ ಗೌರವಾದರ ದಿಟಕು ಮರ್ತ್ಯರನು
ದೈವವೆಂದಾರಾಧಿಸುವ ಮೂಢಮತಿಗಳ ಕಂಡು ಸೆಟೆವೆ
ಆದರೀಗೇಕೆ ನಿನ್ನೊಳಗೆನಗೆ ಮೋಹ ಉಕ್ಕುತಿದೆ
ನೀ ದೈವವೆಂದಲ್ಲ ಸೋಜಿಗದ ಪುರುಷ ನೀನೆಂದೆ[೯]

ಕೃಷ್ಣನು ದೇವರ ಅವತಾರವಲ್ಲ. ಆತನೊಬ್ಬ ಮರ್ತ್ಯದಲ್ಲಿ ಹುಟ್ಟಿ ಬೆಳೆದವನು. ಆದರೆ ಆತ ಸೂಜಿಗಲ್ಲಿನಂತೆ ಹಲವರನ್ನು ಸೆಳೆದವನು. ಸತ್ಯದ ಮಾರ್ಗದಲ್ಲಿ ನಡೆದವನು. ಹಿಡಿದ ಮಾರ್ಗದಲ್ಲಿ ಜಯ ಕಂಡವನು. ಅಸಾಮಾನ್ಯವಾದುದನ್ನು ಸಾಧಿಸಿದವನು, ಮಾರ್ಗ ತೋರಿಸಿದವನು ಈ ಎಲ್ಲಾ ಕಾರಣಗಳಿಂದ ಆತನನ್ನು ದೇವರು ಎನ್ನ ಬೇಕಾಗಿಲ್ಲ. ಸೋಜಿಗದ ಪುರುಷನೆಂದು ಗೌರವಿಸಿದರೆ ಸಾಕೆನ್ನುವುದು ಋಷಿಯ ಆಶಯ. ಹಾಗೇ ಮಾಡಿದಾಗ ಮಾತ್ರವೇ ಕೃಷ್ಣನಿಗೆ ಸರಿಯಾದ ಸ್ಥಾನ ಸಿಗುವುದು. ಒಂದು ವೇಳೆ ದೈವವೆಂದು ಹೋದಾಗ ನಾವು ಕಲ್ಪಿಸಿಕೊಂಡಿರುವ ದೈವವೆಂದರೆ ಭೂತ, ವರ್ತಮಾನ ಮತ್ತು ಭವಿಷ್ಯಗಳನ್ನು ಬಲ್ಲವನೆಂಬ ಮಹಾಕಲ್ಪನೆಯಡಿಯಲ್ಲಿ ಕೃಷ್ಣನನ್ನು ತಂದಾಗ ಎಲ್ಲಾ ಗೊತ್ತಿದ್ದೂ ಆತ ಏಕೆ ಹಾಗೇ ಮಾಡಿದ? ಆತ ಪಾಂಡವರ ಪಕ್ಷಪಾತಿ? ಯುದ್ಧಕಾಮಿ? ಕೌರವರನ್ನು ಕಂಡರೆ ಆತನಿಗೆ ಆಗುತ್ತಿರಲಿಲ್ಲ. ದೇವರಾಗಿಯೂ ಆತನಲ್ಲಿ ಕೆಟ್ಟ ಗುಣಗಳಿದ್ದವು, ಆತನೋರ್ವ ಕೆಟ್ಟ ದೇವರು ಇತ್ಯಾದಿ ಅಪ್ರಬುದ್ಧ ಕಲ್ಪನೆಗಳು ಮೂಡಬಹುದು. ಆದ್ದರಿಂದ ಕೃಷ್ಣನನ್ನು ಓರ್ವ ಸೋಜಿಗ ಪುರುಷನಾಗಿ ನೋಡಬೇಕೆಂಬ ನಿಲುವನ್ನು ಕವಿ ಈ ಸಂದರ್ಭದಲ್ಲಿ ವ್ಯಕ್ತಪಡಿಸಿರುವುದು ನಿಜಕ್ಕೂ ವಿಚಾರಾರ್ಹ ಸಂಗತಿಯಾಗಿದೆ.

ಆ ಕಾರಣದಿಂದಲೇ ಕೃಷ್ಣನ ಬಗ್ಗೆ ಜನಸಾಮನ್ಯರು ವಿಭಿನ್ನ ನೆಲೆಯಲ್ಲಿ ಮಾತನಾಡಿಕೊಳ್ಳುತ್ತಾರೆ. ಕೃಷ್ಣನ ಬಗೆಗೆ ಜನಸಾಮಾನ್ಯರು ಆಡುವ ಮಾತನ್ನು ಕವಿ ಈ ಸಂದರ್ಭದಲ್ಲಿ ಸಂಗ್ರಹಿಸಿದಂತೆ ಕಂಡುಬರುತ್ತದೆ. ಕೃಷ್ಣನು ಜನಸಾಮಾನ್ಯರು ಆಡುವ ಮಾತನ್ನು ಕೇಳುತ್ತಾನೆ. ಅವರು ಆಡುವ ಮಾತು ಕೃಷ್ಣನ ಬಗೆಗೆ ಸಂಶಯವನ್ನು ವ್ಯಕ್ತಪಡಿಸುವಂತಿದೆ.

ತುರುಪಟ್ಟಿಯಲಿ ಬಳೆದ ಈ
ಗೋವಳಿಗ ಭೂಪನಾದನು ನೋಡ ಹಾಲು ಮಡಕೆಯ
ನೆಲಕೆ ಏಣಿಯಿಕ್ಕಿದನಲ್ಲಿ ಅಲ್ಲಿ ಕಲಿತಾಟವನೆ
ಬೆಳಸಿಕೊಂಡನು ಮಧುರನೆಲದೊಡೆತನದ ಗದ್ದುಗೆಗೆ
ಏಣಿ ಬೀಸಿದನು ತನ್ನಬ್ಬೆಯಣ್ಣನ ಗೋಣಿನಲಿ
ನೇಣಿರಿಸಿ ಅಲ್ಲೆ ನಿಲ್ಲದುದಾಯ್ತು ಇವನ ಉತ್ಪಾತ
ರಾಜರಾಜರನೆಲ್ಲ ಕೆಡವಿದನು ಗುರಿಮಾಡಿ ಒಬ್ಬರನು
ಮತ್ತೊಬ್ಬರತ್ತಣಕೆ ಕವಡುಮಾರ್ಗದಲಿ ಆಗದವರನು
ದೈತ್ಯರೆಂದನು ದಳ್ಳಿಸುತೆ ದೈತ್ಯತನವನು ಕೊಂದನವರನು
ಬಲು ದೈತ್ಯನಂದದಲಿ ಕಡೆಗು ತಾ ದೈತ್ಯಾರಿ
ಎನಿಸಿಕೊಂಡನು! ಮಾವ ರಕ್ಕಸನಾಗೆ ಯಾರಿವನು?
ದೇವತೆಯೆ? ಬಂಧುಗಳ ಕೊಂದು ಅವರ ಮಕ್ಕಳನೆ
ಮದುವೆಗೊಂಡನು ಮುದಿಕರಡಿಯನು ಕೆಣಕಿ ಮೈಯ
ಪರಚಿಸಿಕೊಂಡು ಕರಡಿಹೆಣ್ಣನೆ ಮನೆಗೆ ತಂದುಕೊಂಡನು

ಖ್ಯಾತ ನರಕನ ದಣಿದು ಕೊಂದನು ಅವನು ಬಾಳಿಸಿದರಸು
ಮಕ್ಕಳ ಕೂಡಿಕೊಂಡನು ಪಟ್ಟಮಹಿಷಿಯರಿರುವ
ಅಂತಃಪುರಕೆ ಧರೆಯ ಹೊತ್ತಷ್ಟದಿಗ್ಗಜದಂತೆ
ಅಷ್ಟಮಹಿಷಿಯರುಂಟು ಹೊರಲಿವನ ವರಾರೋಹೆಯರು
ಅಲ್ಲಿ ದನವಾಡಿಯಲಿ ಕಲಿತ ತುಡುಗಾಟವನು
ಬೆಳೆಸಿಕೊಂಡನು ನಗರದಲಿ ರಾಜಛತ್ರದ ಬಿಳಿಯ
ನೆಳಲಡಿಯಲಿ ಗೋಪಹೆಣ್ಣುಗಳ ಕುಲಗೆಡಿಸಿ
ಗಂಡಹೆಂಡಿರನಗಚಿದನು ಮುಪ್ಪೆ ಬಾರದ ಚಿರಯುವಕ
ಮೊಮ್ಮರಿಗೆ ಮದುವೆ ಮಾಡಿದ ಕೈಯಲೇ ಹಾರ ಸೂಡುವನು
ತಾನೊಲಿದರಿಗೆ ಕರ್ಮಧರ್ಮದ ಮಾತನಾಡುವ ಇವನ
ಧರ್ಮಕರ್ಮಗಳೆಲ್ಲವನು ದೈವ ಬಲ್ಲುದು ಇವನೆ
ಪರದೈವವೆನುವ ಭಟ್ಟಿಗಳು ಕಟ್ಟಿ ಹಾಡುವರಿವನ
ಸಂಸ್ತವನು ಹೊಗಳಿ ಕೊಂಡಾಡಿವನ ತೊಂಡೆಯವ
ದುಡಿಯಿರೆನ್ನುವನಿವನು ನಿತ್ಯ ಹಾಯಾಗಿಹನು
ಸಲಿಕಿ ಗುದ್ದಲಿ ಹಿಡಿದು ನೆಲವನಗೆದನೆ? ಹೊನ್ನಾರ
ಕಟ್ಟಿದನೆ? ತನಿಗಾಳ ಬಿತ್ತಿದನೆ? ಉತ್ತನೇನನು
ಬಿತ್ತನೇನನು ಬೆಳದನೇನನೂ ಯಾರು ಬಲ್ಲರು!
ನಿಡುನೆಲನ ಒಡೆಯನ ಕೃಷಿಯ ಪರಿಯೇನು? ಕ್ಷತ್ರಿಯರು
ನಾವು ರಾಜತೇಜವ ಮಾಸಿಕೊಳುವುದೆ ಗೊಲ್ಲವೊಕ್ಕಲು
ಮಕ್ಕಲೊಲು? ತನ್ನವರ ನೆಮ್ಮದಿಯ ತಾನೆ ಸೈರಿಸನು
ಸುಮ್ಮನಿರಬಿಡದೆ ಯಾದವರ ಸೈನ್ಯವನು ಕಳುಹಿದನು
ಕೌರವರ ಪಕ್ಷಕ್ಕೆ ಕೊಲಿಸಿದನು ತನ್ನವರ
ಪಾಂಡವರ ಪಕ್ಷದಲಿ ನಿಂತು ಮಮತೆಯಿಲ್ಲದೆ
ಹುಟ್ಟುಕುಲಗೇಡಿ
ಇಂಥನಲ್ಲಣ್ಣಯ್ಯ ಬಲದೇವ
ಸೌಮ್ಯನಾತನು ಮದಿರೆಯ ಸುಖವ ಹಂಚಿಕೊಳುವನು
ನಮ್ಮೊಡನೆ ಅವನ ಬಲ ಇವಗುಂಟೆ? ಬಿಡುಗೂಳಿಯಲ್ಲವನು
ನಾವು ಮಿಸುಕಿದರೆ ಹೊಸಕಲೆಳಸುವನಿವನು
ಇವನ ತುಡುಗಿವನಿಗೆ ಸಾಕು[೧೦]

ಕೃಷ್ಣನು ಉತ್ತದೆಯೇ ಬಿತ್ತದೆಯೇ ಉಂಡವನು ಎಂಬ ಭಾವ ಇಲ್ಲಿ ವ್ಯಕ್ತವಾಗಿದೆ. ಕೃಷ್ಣನನ್ನು ಸಾಮಾನ್ಯ ಮನುಷ್ಯನಾಗಿ ಕಾಣುವುದು ಒಳಿತೆಂದು ಕವಿ ಅಭಿವ್ಯಕ್ತಿಸಿದಂತೆ ಎಲ್ಲಾ ಪಾತ್ರಗಳ ಒಳಗು ಸಾಮಾನ್ಯ ಮಾನವನ ಗುಣಗಳನ್ನು ಗುರುತಿಸುತ್ತಾರೆ. ಪ್ರೀತಿ, ದ್ವೇಷ, ಈರ್ಷೆ, ಸೋಲು, ಗೆಲವು, ನೋವು, ಸಾವು ಎಲ್ಲವನ್ನೂ ಮಾನವನ ಸಹಜ ನೆಲೆಯಲ್ಲಿಯೇ ಗುರುತಿಸುತ್ತಾ ಹೋಗುತ್ತಾರೆ. ಅಭಿಮನ್ಯುವಿನ ಮರಣವಾರ್ತೆ ತಿಳಿದು ಅರ್ಜುನ ಹೇಳುವ ಮಾತು ಆತನ ವ್ಯಕ್ತಿತ್ವಕ್ಕೆ ತಕ್ಕುದಲ್ಲದಿದ್ದರೂ ಸಾಮಾನ್ಯವಾಗಿ ಮನುಷ್ಯನಿಗೆ ಸಹೋದರರಿಗಿಂತಲೂ ಮಕ್ಕಳು ಹೆಚ್ಚಿನವರಾಗಿ ಕಾಣುವುದನ್ನು ಅಭಿವ್ಯಕ್ತಿಸಲಾಗಿದೆ.

ಮಗನ ಕೊಂದರೆ ಸೋದರರು ರಣಮಾರಿಗೊಪ್ಪಿಸಿ ಬಲಿಯ?
ವಿಕ್ರಮೋತ್ಸಾಹ
ಸಾಹಸಿಯ ಶತ್ರುಸೇನೆಯ ಮೃತ್ಯುಯೋಗಕೆ ದಬ್ಬಿ?
ತಮ್ಮಸುವ ಕಾಪಿಟ್ಟುಕೊಂಡರೆ ವೀರರಗ್ರಿಮರು?[೧೧]

ಎನ್ನುತ್ತಾರೆ. ಸಹಜವಾಗಿ ಕುಟುಂಬಗಳಲ್ಲಿ ಕಾಣುವ ಒಂದು ಸಾಮಾನ್ಯ ಚಿತ್ರಣವಿದು. ಎಷ್ಟೇ ಪ್ರೀತಿ ಪಾತ್ರರಾದರೂ ಅರ್ಜುನ ತಮ್ಮಂದಿರ ಬಗ್ಗೆ ಕೋಪಗೊಳ್ಳುತ್ತಾನೆ. ನನ್ನ ಮಗನ ಪ್ರಾಣವನ್ನು ಅರ್ಪಿಸಿ ತಮ್ಮ ಪ್ರಾಣವನ್ನು ಕಾಪಾಡಿಕೊಂಡರೆ ಎಂದು ಅರ್ಜುನ ಹೇಳುವುದು ಮಾನವನ ಸಹಜ ಗುಣವೂ ಆಗಿದೆ.

ಉತ್ತರೆಗೆ ಮಗು ಹುಟ್ಟಿದ ಸಂದರ್ಭದಲ್ಲಿ ಅದು ಅಶ್ವತ್ಥಾಮ ಮತ್ತು ಪಾಂಡವರ ಹೋರಾಟದ ಸಂದರ್ಭದಲ್ಲಿ ಅಶ್ವತ್ಥಾಮ ಬಿಟ್ಟ ಬಾಣದ ಪರಿಣಾಮ ಸಾಯುತ್ತದೆ. ಆಗ ಅಲ್ಲಿಗೆ ಬರುವ ಕೃಷ್ಣ ಎಲ್ಲರ ಆಕ್ರಂದನ, ಮೊರೆಯ ಮೇರೆಗೆ ಮಗುವನ್ನು ಬದುಕಿಸಲು ಮುಂದಾಗುತ್ತಾನೆ. ಕವಿಗೆ ಈ ಸಂದರ್ಭವನ್ನು ಅಸಾಮಾನ್ಯ ಮಾಡಲು ಇಷ್ಟವಿಲ್ಲ. ಅದಕ್ಕಾಗಿ ಮಗುವನ್ನು ಕೃಷ್ಣ ಬದುಕಿಸುವುದು ಇಂದಿನ ಆಧುನಿಕ ಚಿಕಿತ್ಸೆ ವಿಧಾನದಿಂದಲೇ ಆಗಿದೆ.

ಬಾಗಿ ಮಿದುವಾಗಿ ಹಸುಳೆಯನು ಕೈಗೆತ್ತಿದನು
ಬಾಲಮುರುಳೀ ಮನೋಹರನು, ಮೊಗಕೆತ್ತಿ ನಿಡು
ನಿಟ್ಟಿಸುತೆ ಅಮೃತಾಂಶು ದೃಷ್ಟಿಯಲಿ ತುಟಿಯಿಟ್ಟು ತುಟಿಗೆ
ತನ್ನುಸಿರನೂದಿದನು[೧೨]

ಕವಿ ಎಲ್ಲೂ ದೈವತ್ವವನ್ನು ಆರೋಪಿಸದೇ ಘಟನೆಯನ್ನು ಸಾಮಾನ್ಯವೆಂಬಂತೆ ಬಿಂಬಿಸಿದರೂ ನಡೆಯಬಾರದ್ದು ಕೃಷ್ಣನಿಂದಲೇ ನಡೆದು ಆತ ದೇವನಾಗುವತ್ತ ಕತೆಯನ್ನು ನಡೆಸಿಕೊಂಡು ಹೋಗಿದ್ದಾರೆ. ಆದರೆ ಆತ ಓರ್ವ ಅಸಾಮಾನ್ಯ ಮನುಷ್ಯ ಎಂಬುದನ್ನು ಕವ್ಯದ ಉದ್ದಕ್ಕೂ ನಿರೂಪಿಸುವ ಪ್ರಯತ್ನವನ್ನು ಕವಿ ಮಾಡಿದ್ದಾರೆ.

ತನ್ನನ್ನು ತಾನರಿತು ಕೊಳ್ಳಲು ಸಾಗುವ ದಾರಿಯು ಆಧ್ಯಾತ್ಮವಾಗಿ, ಆತ್ಮೋನ್ನತಿಯನ್ನು ಕಂಡುಕೊಳ್ಳುವ ನೆಲೆಯಾಗಿ ಗುರುತಿಸಲಾಗುತ್ತದೆ. ಇದನ್ನು ಹಿಡಿಯಲು ಅನುಸರಿಸುವ ದೇವರು, ಧರ್ಮ, ಪೂಜಾರಿಯ ನೇತೃತ್ವದಲ್ಲಿ ನಡೆಯುವ ಪೂಜೆ, ಯಜ್ಞ ಇತ್ಯಾದಿ ವಿಷಯಗಳು ಮೋಸದ ಶೋಷಣೆಯ ಮುಖಗಳೆಂದು ಚಿಂತಕರು ಭಾವಿಸುತ್ತಾರೆ.ಧರ್ಮರಾಯನ ಆಸ್ಥಾನಕ್ಕೆ ಬಂದ ಚಾರ್ವಾಕ ಈ ಹಿನ್ನೆಲೆಯಲ್ಲಿಯೇ ಮತ, ಧರ್ಮ, ಯಾಗ, ಪೂಜೆಯ ಡೋಂಗಿತನದ ಬಗ್ಗೆ ಮಾತನಾಡುತ್ತಾನೆ. ಇದರಿಂದ ಹೌಹಾರಿದ ಋತ್ವಿಜರು ಆತನನ್ನು ಕೊಲ್ಲುತ್ತಾರೆ. ಇದು ಇಂದಿನ ಸ್ಥಿತಿಯನ್ನು ಬಿಂಬಿಸುತ್ತದೆ. ಧರ್ಮರಾಯನ ಆಸ್ಥಾನದಲ್ಲಿ, ಆಡಳಿತದಲ್ಲಿ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶವಿರಲಿಲ್ಲ ಎಂಬುದನ್ನು ತಿಳಿಸುತ್ತದೆ. ಅದರಲ್ಲಿಯೂ ಅಭಿಪ್ರಾಯಮಂಡನೆ ಮಾಡಿದ ಚಾರ್ವಾಕನನ್ನು ಕೊಲ್ಲುವಲ್ಲಿ ಆಡಳಿತದ ವೈಫಲ್ಯ ಕಾಣಿಸುತ್ತದೆ. ಇಂದಿಗೂ ಹಲವರು ದೇವರು ಧರ್ಮದ ಬಗೆಗಿನ ಆಧುನಿಕ ಚಿಂತನೆಗಳನ್ನು ಒಪ್ಪುವುದಿಲ್ಲ.

ಯಾವುದೇ ಪೂಜೆ, ಧ್ಯಾನ ಎಲ್ಲವೂ ಅಹಿಂಸಾಮಾರ್ಗದಲ್ಲಿಯೇ ನಡೆಯಬೇಕೆಂಬುದು ಆಧುನಿಕ ನಾಗರೀಕ ಸಿದ್ಧಾಂತ. ಹಿಂದೆ ಅಶ್ವಮೇಧ ಎಂದರೆ ಕುದುರೆಯನ್ನು ಬಲಿ ಕೊಡಲಾಗುತ್ತಿತ್ತು. ನಾನಾ ಪೂಜೆಗಳಲ್ಲಿ ಪ್ರಾಣಿಗಳ ಬಲಿ ಚಾಲ್ತಿಯಲ್ಲಿತ್ತು. ಆದರೆ ಆಧುನಿಕತೆ ಅದನ್ನು ಒಪ್ಪುವುದಿಲ್ಲ. ಅವೆಲ್ಲವೂ ಸಾತ್ವಿಕವಾಗಿ ನಡೆಯಬೇಕೆಂದು ಬಯಸುತ್ತಾರೆ. ಆ ಹಿನ್ನೆಲೆಯಲ್ಲಿ ಅನೇಕ ಬುದ್ಧಿಜೀವಿಗಳು ಅಶ್ವಮೇಧ ಯಾಗವನ್ನು ಟೀಕಿಸಿದ್ದು ಉಂಟು. ಆ ಕಾರಣದಿಂದಲೇ ಕವಿ ಯಜ್ಞದ ಸಂದರ್ಭದಲ್ಲಿ ನಿಜವಾದ ಅಶ್ವವನ್ನು ಬಲಿಕೊಡದೆ ಅಶ್ವದ ಪ್ರತಿಮೆಯನ್ನು ಸಮರ್ಪಿಸುತ್ತಾರೆ.

ಹಿಂಸೆಯಿಲ್ಲದ ಮಾರ್ಗದಲಿ
ಕ್ರತುವ ನಡೆಸುವ ಮನದ ಸಂಕಲ್ಪವನು ವರಿಸಿ
ಯಾಗಾಶ್ವ ಪ್ರತಿಮೆಯನು ಸಮೆಸಿದರು ಪಿಷ್ಟದಲಿ
ಕೃಷ್ಣರಿಬ್ಬರ ಮತವನನುಸರಿಸಿ ಯಜ್ಞಪುರುಷನ
ಭಕ್ತಿಯಲಿ ಆವಾಹಿಸಿ ಸಮರ್ಪಿಸಿದರು[೧೩]

ಹಿಂಸೆಯಿಲ್ಲದ ಮಾರ್ಗವನ್ನು ಕಾವ್ಯದುದ್ದಕ್ಕೂ ಅಭಿವ್ಯಕ್ತಿಸಲಾಗಿದೆ.

ಮೂಲಭಾರತದಲ್ಲಿ ಅಶ್ವವನ್ನು ಬಲಿಕೊಡಲಾಗುತ್ತದೆ. ಅಶ್ವಮೇಧಯಾಗ ಕೈಗೊಳ್ಳುವ ಮೊದಲೂ ಕೂಡ ಧರ್ಮರಾಯ ಅರ್ಜುನನಿಗೆ ಯುದ್ಧವನ್ನು ಮಾಡದೆ ಋತಮಾರ್ಗದಲ್ಲಿಯೇ ರಾಜರುಗಳನ್ನು ಜಯಿಸಿ ಬರಬೇಕೆಂದು ಹೇಳುತ್ತಾನೆ. ಅರ್ಜುನನು ರಾಜರು ಯುದ್ಧಕ್ಕೆ ಬಂದಾಗ ಯುದ್ಧ ಮಾಡದೆ ಗೆಲ್ಲಬೇಕೆಂಬುದು ಅಣ್ಣನ ಆಜ್ಞೆ ಎಂದು ಹೇಳಿ ಸಂಧಾನಕ್ಕೆ ಮುಂದಾಗುತ್ತಾನೆ. ಅನಿವಾರ್ಯವಾಗಿ ಕೆಲವೊಮ್ಮೆ ಯುದ್ಧ ಮಾಡುತ್ತಾನೆ. ಅಂತೆಯೇ ಅಶ್ವಮೇಧದಲ್ಲಿಯೂ ಧರ್ಮರಾಯ ಅಹಿಂಸಾ ಮಾರ್ಗವನ್ನೇ ಹಿಡಿಯುತ್ತಾನೆ.

ಇಡೀ ಕಾವ್ಯ ದುರ್ಯೋಧನ ಮತ್ತು ಕೃಷ್ಣನ ಮೇಲೆ ನಿಂತಿದೆ. ಎಲ್ಲಾ ಕಾರ್ಯಗಳು ಕೃಷ್ಣನ ಸುತ್ತ ನಡೆಯುತ್ತವೆ. ನಡೆದ ಘಟನೆಗಳು ಕೃಷ್ಣನ ಸುತ್ತ ನಡೆದವು ಎಂಬಂತೆ ಹೇಳಲಾಗಿದೆ. ಜೊತೆಗೆ ಕೃಷ್ಣನು ಅಸಾಮಾನ್ಯನೆಂದು ಹೇಳಲಾಗಿದೆಯೇ ಹೊರತು ದೇವರೆಂದು ಹೇಳಲಾಗಿಲ್ಲ. ಅದಕ್ಕಿಂತ ಮುಖ್ಯವಾಗಿ ಇದುವರೆಗಿನ ಕೃಷ್ಣನು ದೇವರೆಂದು ಭಾವಿಸಿ ಪೂಜಿಸಿದವರಿಗೂ ದೇವರೆಂದು ತಿಳಿದು ನಾನಾ ನೆಲೆಯಲ್ಲಿ ಆತನ ಹೊರೆಹಚ್ಚಿ ಬೈಯ್ದವರಿಗೂ ಉತ್ತರ ಕೊಡುವ ಪ್ರಯತ್ನ ಈ ಕಾವ್ಯದಲ್ಲಿದೆ.

ಇನ್ನು ಭೀಮನ ಪಾತ್ರವನ್ನು ಸಹಜವಾಗಿ ಕೆಟ್ಟದಾಗಿಯೇ ಬಿಂಬಿಸಲಾಗಿದೆ. ಆತನು ದುರ್ಯೋಧನ ದುಶ್ಯಾಸನನನ್ನು ಕೊಂದ ಬಗೆ, ಬಗೆದ ದ್ವೇಷ ಎಲ್ಲವನ್ನೂ ಕವಿ ವಿಮರ್ಶಿಸಿದ್ದಾರೆ. ಜೊತೆಗೆ ಯುದ್ಧ ನಂತರ ಆತ ನಡೆದುಕೊಳ್ಳುವ ರೀತಿ ವೀರನಿಗೆ ತಕ್ಕುದಾಗಿ ಕಾಣುವುದಿಲ್ಲ. ಹೀಗೆ ಭೀಮನ ಪಾತ್ರವನ್ನು ಕೆಳ ಹಂತದಲ್ಲಿ ಕಾಣುವ ದೃಷ್ಟಿ ಇಲ್ಲಿದೆ. ಮೂಲದಲ್ಲಿಯೂ ಹೀಗೆಯೇ ಚಿತ್ರಿತವಾಗಿದ್ದರೂ ಅಲ್ಲಿ ಅರ್ಜುನ ಮತ್ತು ಹಿರಿಯರ ಬುದ್ಧಿವಾದದ ಬಳಿಕ ಬದಲಾದರೂ ಇಲ್ಲಿ ಮಾತ್ರ ಆತನ ಉದ್ಧಟತನ ಮೇರೆ ಮೀರಿದೆ.

ಮತ್ತೊಂದು ಪಾತ್ರ ದುರ್ಯೋಧನ. ದುರ್ಯೋಧನ ಕೆಟ್ಟವನು ಮತ್ತು ಒಳ್ಳೆಯವನು ಎಂಬ ಎರಡು ನೆಲೆಯಲ್ಲಿ ಕಾವ್ಯ ಸಾಗುತ್ತದೆ. ಕೆಟ್ಟವನು ಎಂಬುದಕ್ಕೆ ಆತ ಪಾಂಡವರಿಗೆ ಮಾತ್ರ ಕೆಟ್ಟವನು ಪ್ರಜೆಗಳಿಗೆ ಒಳ್ಳೆಯವನೆಂದು ಕಾವ್ಯದಲ್ಲಿ ಆಗಾಗ ಅನೇಕ ಘಟನೆಗಳ ಮೂಲಕ ಹೇಳಲಾಗಿದೆ. ಪ್ರಜೆಗಳು ಆತನ ಆಡಳಿತವನ್ನು ನೆನೆದು ಆತನ ಒಳ್ಳೆಯ ಗುಣವನ್ನು ಹೊಗಳುತ್ತಾರೆ. ಅಷ್ಟೇ ಅಲ್ಲದೆ ದುರ್ಯೋಧನ ಪಾಂಡವರ ಮೇಲೆ ದ್ವೇಷ ಕಾರಲು ಅನೇಕ ಕಾರಣಗಳನ್ನು ಕಾವ್ಯ ಹಲವು ಪಾತ್ರಗಳ ಮೂಲಕ ತಿಳಿಸುತ್ತದೆ. ಆತನು ದ್ವೇಷ ಕಟ್ಟಿಕೊಳ್ಳುವುದಕ್ಕೆ ಪಾಂಡವರೇ ಕಾರಣ ಎಂದು ಹೇಳಲಾಗಿದೆ. ಆದರೆ ಆತನಿಗೆ ಪಾಂಡವರ ಕಡೆಯ ಅನೇಕರ ಬಗ್ಗೆಯೂ ಅತೀ ಪ್ರೀತಿಯಿತ್ತು ಎಂದು ಕಟ್ಟಿಕೊಡಲಾಗಿದೆ. ಕುಟುಂಬ, ಮಗಳ ಮಮತೆ, ಕುಂತಿಯನ್ನು ಪ್ರೀತಿಯಿಂದ ಕಂಡದ್ದು ಇಲ್ಲೆಲ್ಲಾ ದುರ್ಯೋಧನನ ಸಾತ್ವಿಕ ಮನಸ್ಸಿಗೆ ಕವಿ ಮನ್ನಣೆ ನೀಡಿದ್ದಾರೆ. ದುರ್ಯೋಧನನು ಉದಾತ್ತನು, ಉತ್ತಮ ಆಡಳಿತಗಾರನು, ಪ್ರೀತಿಪಾತ್ರನು ಎಂದು ಕವಿ ಹೇಳ ಬಯಸಿದ್ದಾರೆ.

ಸಾಮಾನ್ಯ ಕುಟುಂಬದ ಗಂಡ ಹೆಂಡತಿ ಮಗುವಿನ ನಡುವೆ ಸನ್ನಿವೇಶವೊಂದನ್ನು ಕವಿ ನಿರ್ಮಿಸುತ್ತಾರೆ. ಮಗನ ಹಠಮಾರಿತನ ಕಂಡು ತಂದೆ ಮಗನನ್ನು ಕೌರವನಿಗೆ ಹೋಲಿಸಿದರೆ ಹೆಂಡತಿ ಕೌರವನನ್ನು ನೆನೆದು ಆತನು ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಂಡನು. ಆ ಪುಣ್ಯಾತ್ಮನ ಹೆಸರನ್ನು ಏಕೆ ತುಳಿವಿರಿ ಎನ್ನುತ್ತಾಳೆ. ಆಗ ಗಂಡನೂ ಕೂಡ ದುರ್ಯೋಧನನ ಗುಣವನ್ನು ನೆನೆಯುತ್ತಾನೆ. ಜೊತೆಗೆ ಗೆದ್ದ ದೊರೆಯ ಆಡಳಿತ ಕಾಣುತ್ತಿಲ್ಲವೆ ಎಂದು ಅಪಸ್ವರ ತೆಗೆಯುವುದು ಧರ್ಮರಾಯನ ಆಡಳಿತ ಸರಿಯಿರಲಿಲ್ಲ ಎಂಬುದನ್ನು ತಿಳಿಸುತ್ತದೆ. ಆದರೆ ದ್ರೌಪದಿ ಕುರಿತು ಅವರಾಡುವ ಮಾತು ಕಾವ್ಯಕ್ಕೆ ಶೋಭೆ ತರುವಂತೆ ಕಾಣುವುದಿಲ್ಲ

ಕಾವ್ಯದಲ್ಲಿ ಹಲವು ಸಂದರ್ಭಗಳಲ್ಲಿ ದುರ್ಯೋಧನನ ಬಗ್ಗೆ ಪಾಂಡವರ ಬಗ್ಗೆ ಜನ ಮಾತನಾಡಿಕೊಳ್ಳುತ್ತಾರೆ. ಅಂತಹ ಸಂದರ್ಭಗಳಲ್ಲಿ ದುರ್ಯೋಧನನ ಪಾತ್ರ ಔನ್ನತ್ಯಕ್ಕೆ ಹೋಗಿದೆ. ಆದರೆ ಪಾಂಡವರ ವ್ಯಕ್ತಿತ್ವಕ್ಕೆ ತಕ್ಕುದಾಗಿ ಆ ಜನ ಮಾತನಾಡಿಕೊಳ್ಳುವುದಿಲ್ಲ. ಕವಿ ಹೊಸದಾದ ದೃಷ್ಟಿಕೋನವನ್ನು ಅಭಿವ್ಯಕ್ತಿಸಲು ಹೋಗಿ ಕೆಲವು ಸಂದರ್ಭಗಳಲ್ಲಿ ಕೆಲವೊಂದು ಪಾತ್ರಗಳ ಬಗ್ಗೆ ಲಘುವಾಗಿ ಮಾತನಾಡಿಸುತ್ತಾರೆ. ದ್ರೌಪದಿಯ ಬಗ್ಗೆಯೂ ಜನ ಅವಹೇಳನಕರವಾಗಿ ಮಾತನಾಡಿಸುವ ಮೂಲಕ ಕವಿ ಪಾತ್ರೋನ್ನತಿಯನ್ನು ಮಾಡಿಸುವ ಬದಲು ಪಾತ್ರದ ಅವನತಿಯನ್ನು ಮಾಡಿಸುತ್ತಾರೆ.

ಅಹುದಹುದು ಮಡದಿಯೊಬ್ಬಳಿಗೆ
ಪತಿಗಳೈವರು ಇವರು ಆ ಪತಿವ್ರತೆಯ ರಾಜತೇಜವೆ
ತೇಜ ಮಂದಿ ನಮಗಿದ್ದಿರದ ಬಹುತೇಜ ರಾಣಿಯದು[೧೪]

ಇದು ಇದ್ದಿರುವ ಪ್ರಶ್ನೆಯಾದರೂ ಉಳಿಯುವ ಪ್ರಶ್ನೆಯಾಗಬಾರದು. ಇಂತಹದ್ದು ಕಾವ್ಯದಲ್ಲಿ ನುಸುಳದಿದ್ದರೆ ಚೆಂದವೇನೋ. ಪಾತ್ರಗಳನ್ನು ಉದ್ಧರಿಸಬೇಕಾದ್ದು ಹೊಸ ದೃಷ್ಟಿಕೋನ. ಉದ್ಧಾರ ಮಾಡಬೇಕೇ ಹೊರತು ಉದ್ಧಾರವಾದವರನ್ನು ಕಡೆಗಣಿಸಬಾರದು. ಕೌರವರಿಗೆ ಮಾನ್ಯತೆ ನೀಡುವುದು ಸರಿ ಆದರೆ ಪಾಂಡವರ ಮಾನ್ಯತೆ ಕಡಿಮೆಯಾಗಬಾರದು. ಕಾರಣ ಇದು ಸರ್ವರ ಕಾಲ.

ಕುಂತಿ, ದ್ರೌಪದಿ ಇವರೆಲ್ಲರು ಒಂದು ಕುಟುಂಬದ ಸಂಸ್ಕೃತಿಯ ಪ್ರತಿನಿಧಿಗಳು. ಕೆಟ್ಟವರಲ್ಲ ಕಾಮಿಗಳಲ್ಲ. ಆದರೆ ಅವರನ್ನು ಕಾವ್ಯ ಅತಿ ಕೆಟ್ಟದಾಗಿ ಕಾಣುವುದು ಕಾವ್ಯಕ್ಕೆ ಶೋಭೆತರದು

ಜನತೆ ಪಾಂಡವರ ಕುಲದ ಹೆಣ್ಣುಗಳ ಬಗ್ಗೆ ಹೇಳುವುದು
ಸತ್ಯವತಿಯರ ಪಾಡು ಗೊತ್ತಿರದೆ?
ಅಂಬಾಲೆ ಅಂಬಿಕೆಯ ಬೆಳಸೇನು ತಿಳಿದಂತಹುದೆ
ಒಂದ ಮೀರಿಸುವುದಿನ್ನೊಂದು ಕತೆ ಎಲ್ಲ ಮೀರಿಸಿದ
ಕುಂತಿ ದೇವಿಯರ ಮೆಟ್ಟಿಕ್ಕಿ ನಿಂತಳು ರಾಣಿ ಪಾಂಚಾಲಿ
ದಾರಿ ತಪ್ಪಿದ ಮಡದಿಯನು ಮನೆಯಾಚೆ ದಬ್ಬುವೆವು
ಬೆಪ್ಪುಗಳು ಹೊದರು ತಾಳಿಯ ಗದರು ಪಾಳಿಯ ಪತಿವ್ರತೆಯ
ವೀರಪತಿಗಳು ನಮ್ಮ ಪ್ರಭುಗಳು ಒಂದೆ ವೃಕ್ಷದಲಿ
ಹಲವು ಫಲ[೧೫]

ಇಲ್ಲೆಲ್ಲ ಪಾಂಡವರ ಕುಲದ ಅವಹೇಳನವಿದೆಯೇ ಹೊರತು ಬೇರೆ ದೃಷ್ಟಿಕೋನವಿಲ್ಲ.

ಕೊನೆಗೆ ಭಾನುಮತಿಯೇ ಹುಚ್ಚಿಯಾಗಿ ಪಾಂಡವರ ಮೇಲೆ ಮಾತನಾಡುವ ಮಾತು ಆಕೆಯನ್ನು ಓರ್ವ ಸಾಮಾನ್ಯ ಸ್ತ್ರೀಗಿಂತಲೂ ಕಡೆಯಾಗಿ ತಂದು ನಿಲ್ಲಿಸುತ್ತದೆ. ಆಕೆ ಪಾಂಡವರನ್ನು ಕುರಿತು ಆಡುವ ಮಾತು ಆಕೆಯ ಘನತೆಗೆ ಶೋಭೆ ತರುವುದಿಲ್ಲ. ಆ ಪಾತ್ರ ಅತ್ಯಂತ ಹೀನ ಮಟ್ಟಕ್ಕೆ ಇಳಿದಿದೆ. ಜನಸಾಮಾನ್ಯ, ಹೆಣ್ಣೊಬ್ಬಳು ಅನಾಗರೀಕ ಸ್ತ್ರೀಯೋರ್ವಳು ನುಡಿದಂತಿದೆ. ಆಕೆಯ ಮಾತು ಗಮನಿಸಿದರೆ ವ್ಯಾಸನ ಭಾನುಮತಿ ಇಲ್ಲಿಲ್ಲ. ಮಹಾಭಾರತದ ದುರ್ಯೋಧನನ ಮಡದಿ ಇಲ್ಲಿಲ್ಲ. ಇಲ್ಲಿರುವ ಭಾನುಮತಿ ಯಾವನೋ ಸಾಮಾನ್ಯ ವ್ಯಕ್ತಿಯ ಹೆಂಡತಿಯಾಗಿ ಕಂಡುಬರುತ್ತಾಳೆ. ಉರಿಯ ಮಾರಿಯ ಜಯವನಭ್ಯಂಜಿಸಿತು ನನ್ನೋಪನೆದೆಯ

ನೆತ್ತರು ಹೆಣ್ಣೊ ರಕ್ಕಸಿಯೊ? ಮಾನವಿಯೊ? ಮೃಗವೊ
ಯಾವ ಹೆಣ್ಣವಳ ಹಡೆದಳು ಸುಳುಬಾಳಿನ ಗರತಿಯನು?
ಇವಳ ಮುಡಿಯ ಬೀಸಿನ ಗಾಳಿಯಲಿ ಪತಿಯ ಬಸುರಿನ
ನೆತ್ತರಿನ ಸೊಗಡೆ ಹೊಡೆಯುವುದು ಇವಳ ಉರಿಮಂಡೆ

ಬೋಳಾಗ ನನ್ನ ಗಂಡನ ಕರುಳ ಮುಡಿದವಳ
ಕರುಳಿನ ಕುಡಿಯ ವಿಧಿಯೆ ನುಂಗಿತು ಇವಳ ಹಾಸುಗೆಗೆ
ಉರಿಬೀಳ ನನ್ನ ಭಾಗ್ಯವ ನುಂಗಿ ಕುಡಿದಳು ನೀರ
ಎಚಿತಿವಳ ಉರಿನೆಳಲ ಕುಡಿಯಲಿ? ಎಂತು ಮೂಗಳಲ
ಕಂಬನಿಯ ಕುಡಿಯುತ್ತ ಬದುಕಿರಲಿ ಪತಿಹೀನೆ ನಾ
ಪುತ್ರಹೀನೆ? ಇವಳ ಸೂಳುಗಂಡರ ನೆಳಲಿನಲಿ
ಬಾಳಬೇಕಿದೆ ನಾವು ಆ ಪಟ್ಟೆ ಹೊಟ್ಟೆಯ ಕೋಣ
ಬೆಂಕಿ ಮಾರಿಯ ಗಂಡ ಆ ಕತ್ತೆ ಕಿರುಚನ ಎಂತು
ಸಹಿಸಲಿ? ನನ್ನವನ ಎದೆ ನೆತ್ತರನು ಕುಡಿದು ಕೊಬ್ಬಿದ
ಜಿಗುಳೆಯನು ಹೊಸಕಿ ಬಿಸುಡದೆಯೆ ನಾನೆಂತು ಕುಡಿದು ಬದುಕಲಿ
ಅವನುಸಿರ ದುಗಧವನು? ಪಟ್ಟದರಸಿಯನೊಬ್ಬರಳದೆ
ಬಾಳುತಿರುವವರು ಐವರೊಂದಾಗಿ ಒಂದೆ ಹಾಳೆಯಲಿ
ತಿನ್ನುವರು ಮೃಷ್ಟಾನ್ನವನು ಗಂಡರೇನವರು
ಪಾಷಂಡರು? ಮರೆಬಾಳ ಗರತಿಯ ದೇವತಾಸುತರು[೧೬]

ಎಂದು ಅರಚಿಕೊಳ್ಳುತ್ತಾಳೆ. ಆಕೆಯ ಪಾತ್ರಕ್ಕೆ ಶೋಭೆ ತರುವಂತಿಲ್ಲ. ಅಷ್ಟಕ್ಕೂ ಆಕೆ ಹುಚ್ಚಿಯಾಗಿರುವುದಿಲ್ಲ. ಧೃತರಾಷ್ಟ್ರ, ಗಾಂಧಾರಿ ವಾನಪ್ರಸ್ಥಕ್ಕೆ ಹೋದಾಗ ಸಹಜವಾಗಿ ಅವರೊಡನೆ ಹೋಗುತ್ತಾಳೆ. ಹೀಗಿರುವಾಗ ಆಕೆಯಿಂದ ಈ ರೀತಿ ಮಾತು ಕಾವ್ಯಕ್ಕೂ ಶೋಭೆಯಲ್ಲ, ಪಾತ್ರಕ್ಕೂ ಶೋಭೆಯಲ್ಲ.

ಒಟ್ಟಿನಲ್ಲಿ ಇಡೀ ಕಾವ್ಯ ನಾನಾ ದೃಷ್ಟಿಕೋನಗಳಿಂದ ಭಿನ್ನವಾಗಿದೆ. ಯುದ್ಧದ ನಂತರ ಅನೇಕ ಪಾತ್ರಗಳು ಮುಖಾಮುಖಿಯಾಗಿ ತಮ್ಮ ಮನದ ತಳಮಳಗಳನ್ನು ಹಂಚಿಕೊಂಡು ಧರ್ಮ ಮತ್ತು ಅಧರ್ಮದ ನೆಲೆಗಳನ್ನು ಗಟ್ಟಿಗೊಳಿಸುತ್ತಾರೆ. ವ್ಯಾಸ, ಅರ್ಜುನ, ಭೀಷ್ಮ, ಅಶ್ವತ್ಥಾಮ, ಧರ್ಮರಾಯ, ಕೃಷ್ಣ, ಭೀಷ್ಮ, ಗಾಂಧಾರಿ, ಸುಭದ್ರೆ ಹೀಗೆ ಅನೇಕ ಪಾತ್ರಗಳು ಭಾವನೆಗಳ ಸಂಘರ್ಷದಲ್ಲಿ ಪಕ್ವಗೊಳ್ಳುತ್ತವೆ. ಮಹಾಭಾರತ ಏಕೆ ನಡೆಯಿತು? ಕೃಷ್ಣನ ಪಾತ್ರವೇನು? ಇತ್ಯಾದಿ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿದೆ.

**ಕೊನೆಟಿಪ್ಪಣಿಗಳು**


1. ಸುಜನಾ, ಯುಗಸಂಧ್ಯಾ, 2015–ಪು.ಸಂ. 9
2. ಅದೇ
3. ಅದೇ
4. ಪ್ರಧಾನ್ ಗುರುದತ್ತ, ಸುಜನಾ, 2012–ಪು.ಸಂ. 96
5. ಸುಜನಾ, ಯುಗಸಂಧ್ಯಾ, 2015–ಪು.ಸಂ. 21
6. ಅದೇ – ಪು.ಸಂ. 153
7. ಅದೇ – ಪು.ಸಂ. 160
8. ಅದೇ – ಪು.ಸಂ. 161
9. ಅದೇ – ಪು.ಸಂ. 164
10. ಅದೇ – ಪು.ಸಂ. 358
11. ಅದೇ – ಪು.ಸಂ. 172
12. ಅದೇ – ಪು.ಸಂ. 184
13. ಅದೇ – ಪು.ಸಂ. 232
14. ಅದೇ – ಪು.ಸಂ. 261
15. ಅದೇ – ಪು.ಸಂ. 263
16. ಅದೇ – ಪು.ಸಂ. 266